ಆ ಭಾಗದ ಮೇಲೆ ಭೀಕರ ದಾಳಿ ಆರಂಭವಾಯಿತು. ಆದರೆ ಅವರು ಅದಾಗಲೇ ನದಿಯ ಜಾಡು ಹಿಡಿದು ಇನ್ನೊಂದು ತಾಣಕ್ಕೆ ಸಾಗಿ ಹೋಗಿದ್ದರು. ಸ್ಫೋಟದ ಕೆಂಪು ಜ್ವಾಲೆಗಳು ಕಾಡಿನ ದಟ್ಟ ಕತ್ತಲೆಯ ಮೇಲೆ ಮರಣದ ವಿಚಿತ್ರ ಆಕೃತಿಗಳನ್ನು ರಚಿಸಿ ನಿಧಾನವಾಗಿ ಮಾಯವಾಗುತ್ತಿದ್ದವು.

ಲಿನ್ ಮೌನವಾಗಿ ಕುಳಿತಿದ್ದನು. ಹಿಂದಿನ ದಿನ ಬೆಂಕಿಯಲ್ಲಿ ಕರಗಿಹೋದ ಬಾಲ್ಯದ ಗೆಳೆಯನ ನೆನಪಾಯಿತು. ಮನೆಯನ್ನು ಬಿಟ್ಟು ಬಂದ ಇಷ್ಟು ವರ್ಷಗಳಲ್ಲಿ ಅವನೇ ಲಿನ್‌ಗೆ ಎಲ್ಲವೂ ಆಗಿದ್ದ. ಆದರೆ ಈಗ ಅವನೇ ಇಲ್ಲ ಎಂದಾದಾಗ ಎಲ್ಲವೂ ಶೂನ್ಯದಂತೆ ಭಾಸವಾಯಿತು. ತಾಯಿಯ ನೆನಪಾಯಿತು. ಅವನ ಮನಸ್ಸು ದುಃಖದಿಂದ ಚೀರುತ್ತಾ 'ಯಾವುದು, ಯಾರಿಗೆ ಜಯ?' ಎಂದು ಕೇಳುತ್ತಿತ್ತು.

'ಇದು ಬದುಕು ಉಳಿಸಿಕೊಂಡದ್ದಷ್ಟೇ' ಎನ್ನುತ್ತಾ ಆ ರಾತ್ರಿ ಅವನು ಮೊದಲ ಬಾರಿ ಬಿಕ್ಕಿ ಅತ್ತನು. ಅವನ ಬಿಕ್ಕುವಿಕೆಯ ಧ್ವನಿ ಕೇಳಿದ ಥಾವ್ ಹತ್ತಿರ ಬಂದು ಅವನ ಭುಜವನ್ನು ಸವರುತ್ತಾ 'ನಿನಗೆ ಮೊದಲ ಸಾರಿ ಯುದ್ಧಕ್ಕೆ ಬಂದ ದಿನ ನೆನಪಿದೆಯಾ?' ಎಂದು ಕೇಳಿದರು.

ಲಿನ್ ಹೌದೆಂಬಂತೆ ತಲೆಯಾಡಿಸಿದನು. 'ಆ ದಿನ ನಾನು ಮನೆ ಬಾಗಿಲ ಕಡೆ ತಿರುಗಿ ನೋಡದೆ ಉತ್ಸಾಹದಿಂದ ಬಂದೆ. ಆದರೆ ಈಗ ಮನೆಯ ನೆನಪು, ತಾಯಿ, ಪುಟ್ಟ ತಂಗಿಯ ನೆನಪು ಬಿಟ್ಟು ಬಿಡದೇ ಕಾಡುತ್ತಿದೆ. ಒಂದೊಮ್ಮೆ ನನ್ನ ಗೆಳೆಯನ ರೀತಿ ಅವರನ್ನೆಲ್ಲ ನೋಡದೆ ಹಾಗೆಯೇ ಗಾಳಿಯಲ್ಲಿ ಲೀನವಾದರೇ ಎಂಬ ಭಯ ಕಾಡುತ್ತಿದೆ' ಎಂದನು.

ಥಾವ್ ಅವನ ಕಡೆ ನೋಡಿದರು. 'ಭಯವನ್ನು ಓಡಿಸಲು ಯತ್ನಿಸಬೇಡ. ಅದನ್ನು ಜೊತೆಯಲ್ಲಿ ಇರಿಸಿಕೊಂಡೇ ಹೋರಾಡಬೇಕು' ಲಿನ್ ಆತನನ್ನು ನೋಡುತ್ತ ಮೌನವಾಗಿದ್ದನು. 'ನನಗೆ ಒಬ್ಬಳು ಚಿಕ್ಕ ಮಗಳು ಇದ್ದಾಳೆ' ಥಾವ್ ನಿಧಾನವಾಗಿ ಹೇಳಿದರು. 'ಅವಳು ನನಗೆ 'ಅಪ್ಪ, ನೀನು ಯಾವಾಗ ಬರುತ್ತೀಯಾ?' ಎಂದು ಕೇಳಿದಾಗ, ನಾನು ಯಾವತ್ತೂ 'ಬೇಗ' ಎನ್ನುತ್ತೇನೆ. ಆದರೆ ಯುದ್ಧದಲ್ಲಿ 'ಬೇಗ' ಎಂಬುದೊಂದು ಸುಳ್ಳು ಪದ'. ಗಾಳಿ ನಿಧಾನವಾಗಿ ಎಲೆಗಳನ್ನು ಅಲುಗಾಡಿಸಿತು.

'ನೀನು ಏಕೆ ಹೋರಾಡುತ್ತಿದ್ದೀಯ?' ಥಾವ್ ಮತ್ತೆ ಕೇಳಿದರು. ಲಿನ್ ಮಣ್ಣನ್ನು ಕೈಯಲ್ಲಿ ಹಿಡಿದು ಬಿಗಿಸಿಕೊಂಡ. 'ನನ್ನ ತಾಯಿಯ ನಗುವನ್ನು ಹಿಂದಿರುಗಿಸಲು' ಎಂದಾಗ ಥಾವ್ ಕಣ್ಣುಗಳಲ್ಲಿ ಕ್ಷಣಕಾಲ ಮಿನುಗಿದುದು ಹೆಮ್ಮೆಯೋ, ದುಗುಡವೋ ತಿಳಿಯಲಿಲ್ಲ.

'ಹೌದು ಜಯಕ್ಕಾಗಿ ಹೋರಾಡಬೇಡ, ಯಾರು ಕಾಯುತ್ತಿದ್ದಾರೆ ಅವರಿಗಾಗಿ ಬದುಕಿ ಮರಳಲು ಹೋರಾಡು. ಸಾಯುವುದು ಸುಲಭ. ಬದುಕಿ ಮರಳುವುದು ಕಷ್ಟ' ಅನಂತವನ್ನು ದಿಟ್ಟಿಸುತ್ತಾ ತಮ್ಮ ಮನದ ಮಾತೋ ಎಂಬಂತೆ ಅವರು ಹೇಳಿದರು. ಆ ಮಾತು ಕೇಳಿದ ಲಿನ್‌ನ ಎದೆಯಲ್ಲಿ ಏನೋ ಒಂದು ವಿಶ್ವಾಸ ಗಟ್ಟಿಯಾಗಿ ನೆಲೆಯೂರಿತು. ಅಂದು ಆತ ನಸುನಗುತ್ತ ಮಲಗಿದ್ದನು. ಬೆಳಗ್ಗೆ ಎದ್ದಾಗ ದೇಶಕ್ಕಾಗಿ ಅವನು ಮತ್ತೆ ಯೋಧನಾಗಿದ್ದನು.

ಹುಣ್ಣಿಮೆಯ ಬೆಳಕಿನಲ್ಲಿ ನದಿಯ ತೀರದಲ್ಲಿ ಕುಳಿತಿದ್ದ ಲಿನ್‌ಗೆ, ಆ ರಾತ್ರಿ ಕಾಡು ವಿಚಿತ್ರವಾದ ಮೌನದಿಂದ ತುಂಬಿದ್ದಂತೆ ಭಾಸವಾಯಿತು. ನೀರಿನಲ್ಲಿ ತನ್ನ ಮುಖವನ್ನು ನೋಡಿದಾಗ ಅವನಿಗೆ ತಾಯಿಯ ನೆನಪಾಯಿತು. 'ನೀನು ಯಾವತ್ತೂ ನಗುತ್ತಿರಬೇಕು' ಎಂದು ಅವಳು ಹೇಳುತ್ತಿದ್ದಳು. ಅವನು ತುಸು ನಗಲು ಪ್ರಯತ್ನಿಸಿದ. ತುಟಿಗಳು ಮಾತ್ರ ಚಲಿಸಿದವು, ಆದರೆ ಕಣ್ಣುಗಳಲ್ಲಿ ಕಣ್ಣೀರು ತುಂಬಿಕೊಂಡಿತು.

ಒಮ್ಮೆ ಇದೇ ಚಂದ್ರನ ಬೆಳಕಿನಲ್ಲಿ, ಚಿಕ್ಕವನಾಗಿದ್ದಾಗ, ನದಿಯ ತೀರದಲ್ಲಿ ನಿಂತು ಕಲ್ಲುಗಳನ್ನು ಎಸೆದು 'ನೋಡು ಅಮ್ಮಾ, ನಾನು ಶತ್ರುಗಳನ್ನು ಹೊಡೆಯುತ್ತಿದ್ದೇನೆ!' ಎಂದು ಗರ್ವದಿಂದ ಹೇಳುತ್ತಿದ್ದನು. ಆ ದಿನ ಯುದ್ಧ ಅವನಿಗೆ ಆಟವಾಗಿತ್ತು. ಮರದ ಕಡ್ಡಿಯನ್ನು ಕತ್ತಿಯಂತೆ ಹಿಡಿದು 'ನಾನು ದೊಡ್ಡ ಯೋಧನಾಗುತ್ತೇನೆ' ಎಂದು ಘೋಷಿಸುತ್ತಿದ್ದಾಗ, ಅವನ ತಾಯಿ ನಗುತ್ತಲೇ ಹೇಳಿದ್ದಳು 'ಎಲ್ಲವನ್ನೂ ಯುದ್ಧದಿಂದ ಗೆಲ್ಲಲು ಸಾಧ್ಯವಿಲ್ಲ ಮಗನೇ'. ಆಗೆಲ್ಲ ಅವನು ಕಣ್ಣುಗಳಲ್ಲಿ ಹೊಳಪು ಮೂಡಿಸುತ್ತ 'ದೇಶಕ್ಕಾಗಿ ಹೋರಾಡಿ ಸಾಯುವುದು ಗೌರವ ಅಮ್ಮಾ!' ಎಂದು ನುಡಿಯುತ್ತಿದ್ದನು. ಅವನ ಮಾತನ್ನು ಕೇಳಿದಾಗಲೆಲ್ಲ ಅವನ ತಾಯಿ ಮೌನವಾಗುತ್ತಿದ್ದಳು. ಗ್ರಾಮಕ್ಕೆ